739 (1219) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದ ರೈತರಿಗೆ ಸರ್ಕಾರ ಅನೇಕ ಜನಪರ ಯೋಜನೆಗಳಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಕೃಷಿ ಚಟುವಟಿಕೆಗೆ ಬೇರೆಯವರ ಕೆರೆಗಳಿಂದ ಅಥವಾ ದೂರದ ಕೆರೆಗಳಿಂದ ನೀರೆತ್ತಲು ಸೀಮೆಎಣ್ಣೆ ಚಾಲಿತ ವಿಲೆಯರ್ಸ್ ಪಂಪ್‌ಗಳಿಗೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆ ಒದಗಿಸಲಾಗುವುದೆ ,

(ಆ) ಮೀನುಗಾರಿಕೆಗೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆ ಮತ್ತು ಡೀಸೆಲ್ ಒದಗಿಸುವ ರೀತಿ ಬಡ ರೈತರಿಗೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆಯನ್ನು ನೀಡದಿರಲು ಕಾರಣವೇನು ,

(ಇ) ಸಬ್ಸಿಡಿ ದರದಲ್ಲೆ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಸೀಮೆಎಣ್ಣೆ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ, ರೈತರಿಗೆ ಮತ್ತು ಮೀನುಗಾರಿಕೆಗೆ ಪ್ರತ್ಯೇಕ ನೀತಿಯನ್ನು ಅನುಸರಿಸಲು ಕಾರಣವೇನು , ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರದ ಕ್ರಮವೇನು ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) –

(ಅ) ಇಲ್ಲ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಸಾರ್ವಜನಿಕ ವಿತರಣಾ ಪದ್ಧತಿ (ಪಿಡಿಎಸ್)ಯಡಿ ವಿತರಿಸಲು ಮಾತ್ರ ಸೀಮೆಎಣ್ಣೆಯನ್ನು ನೀಡುತ್ತಿದ್ದು, ಇತರೆ ಉದ್ದೇಶಗಳಿಗೆ ನೀಡಲು ಸೀಮೆಎಣ್ಣೆ ಹಂಚಿಕೆ ಇರುವುದಿಲ್ಲ

(ಆ) ನಾಡದೋಣಿಗಳ ಮೀನುಗಾರರಿಗೆ ಈಗ ನೀಡುತ್ತಿರುವ ತಲಾ 200 ಲೀಟರ್‌ಗಳ ಸೀಮೆಎಣ್ಣೆ ಪಿಡಿಎಸ್ ಅಡಿಯದಾಗಿದ್ದು, ಹೆಚ್ಚುವರಿ 200 ಲೀಟರ್ ಸೀಮೆಎಣ್ಣೆಯನ್ನು ಮೀನುಗಾರರು ತಮ್ಮ ಹೆಚ್ಚುವರಿ ಬೇಡಿಕೆಗಾಗಿ ಮುಕ್ತ ಮಾರುಕಟ್ಟೆಯಿಂದ ಸೀಮೆಎಣ್ಣೆಯನ್ನು ಖರೀದಿಸಿ ಸರ್ಕಾರ ನೀಡುವ ಸಹಾಯಧನವನ್ನು ಪಡೆಯುತ್ತಾರೆ ರೈತರ ನೀರಾವರಿ ಪಂಪ್‌ಗಳಿಗೆ ಸರ್ಕಾರವು ಪ್ರತ್ಯೇಕ ನೀತಿಯನ್ನು ರೂಪಿಸಿರುವುದರಿಂದ ವ್ಯವಸಾಯಕ್ಕಾಗಿ ರೈತರಿಗೆ ಸೀಮೆಎಣ್ಣೆ ನೀಡಲು ಸಾಧ್ಯವಿರುವುದಿಲ್ಲ

(ಇ) ರೈತರಿಗೆ ನೀರಾವರಿ ಉದ್ದೇಶಗಳಿಗೆ ಸೀಮೆಎಣ್ಣೆ ನೀಡುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ ನೀರಾವರಿಗಾಗಿ ಪ್ರತ್ಯೇಕ ಯೋಜನೆಗಳಿರುತ್ತದೆ ರೈತರಿಗೆ ಮತ್ತು ಮೀನುಗಾರರಿಗೆ ಪ್ರತ್ಯೇಕ ನೀತಿಯನ್ನು ಅನುಸರಿಸುತ್ತಿಲ್ಲ ರೈತರಿಗೆ ಸಹ ಸಾರ್ವಜನಿಕ ವಿತರಣಾ ಪದ್ದತಿಯಡಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಮಾಹೆಯಾನ ತಲಾ 4 ಲೀಟರ್‌ನಂತೆ ಸೀಮೆಎಣ್ಣೆ ನೀಡಲಾಗುತ್ತಿದೆ

740 (1220) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಎಷ್ಟು ಜನರಿಗೆ ಪಡಿತರ ಚೀಟಿಯನ್ನು ನೀಡಲಾಗಿದೆ (ಜಿಲ್ಲಾವಾರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು),

(ಆ) ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುಗಳಲ್ಲಿ ಬಿಪಿಎಲ್, ಅಂತ್ಯೋದಯ, ಅಕ್ಷಯ, ಅನ್ನಪೂರ್ಣ ಕಾರ್ಡುಗಳನ್ನು ವಿತರಿಸಲು ಬಾಕಿ ಉಳಿದಿರುವ ಸಂಖ್ಯೆಯೆಷ್ಟು, ಹಾಗಿದ್ದಲ್ಲಿ ಯಾವಾಗ ವಿತರಿಸಲಾಗುವುದು,

(ಇ) ಕಾರ್ಡುಗಳಿಲ್ಲದೆ ಪಡಿತರ ಸಾಮಗ್ರಿಗಳನ್ನು ಪಡೆಯಲು ಅವರಿಗೆ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ , ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ,

(ಈ) ಕಳೆದ ವರ್ಷದಿಂದ ಇರುವ ದೋಷ ಹೋಗಲಾಡಿಸಿ ಕಾರ್ಡು ವಿತರಣೆ ಮಾಡಲಾಗುವುದೆ

(ಉ) ಕಾರ್ಡನ್ನು ವಿತರಿಸದೇ ವಿಳಂಬ ಉಂಟು ಮಾಡಿದವರ ವಿರುದ್ಧ ಕ್ರಮ ಜರುಗಿಸಲಾಗುವುದೇ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) –

(ಅ) ರಾಜ್ಯದಲ್ಲಿ 25,552 ಅನ್ನಪೂರ್ಣ, 11,75,903 ಅಂತ್ಯೋದಯ ಅನ್ನಯ ಯೋಜನೆ, 61,27,982 ಅಕ್ಷಯ ಹಾಗೂ 45,52,766 ಎ ಪಿ ಎಲ್ ವರ್ಗಗಳ ಒಟ್ಟು 1,18,82,203 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 351 ಅನ್ನಪೂರ್ಣ, 15854 ಅಂತ್ಯೋದಯ ಅನ್ನಯ ಯೋಜನೆ, 1,50,218 ಅಕ್ಷಯ ಹಾಗೂ 1,70,805 ಎ ಪಿ ಎಲ್ ವರ್ಗಗಳ ಒಟ್ಟು 3,37,228 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ (ಜಿಲ್ಲಾವಾರು ಹಾಗೂ ದಕ್ಷಿಣ ಕನ್ನಡದ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ),

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 351 ಅನ್ನಪೂರ್ಣ, 15854 ಅಂತ್ಯೋದಯ ಅನ್ನ ಯೋಜನೆ, 1,50,218 ಅಕ್ಷಯ ಹಾಗೂ 1,70,805 ಎ ಪಿ ಎಲ್ ವರ್ಗಗಳ ಒಟ್ಟು 3,37,228 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ

(ಇ) ಬಂದಿದೆ ಈ ಕುರಿತು ಜಿಲ್ಲಾಧಿಕಾರಿಗಳಿಗೆ ಎಲ್ಲಾ ಅರ್ಹ ಫಲಾನುಭವಿಗಳನ್ನು ಸೇರ್ಪಡೆ ಮಾಡಲು ನಿರ್ದೇಶನ ನೀಡಲಾಗಿರುತ್ತದೆ

(ಈ) ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಿದ ಫಲಾನುಭವಿಗಳಿಗೆ ಹಾಗೂ ವರ್ಗ ಬದಲಾವಣೆ ಕೋರಿದ ಅರ್ಹರಿಗೆ ಗಣಕೀಕೃತ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ ಖಾಯಂ ಪಡಿತರ ಚೀಟಿ ವಿತರಣೆ ವೇಳೆಯಲ್ಲಿ ಇತರೆ ದೋಷಗಳನ್ನು ಸರಿಪಡಿಸಲಾಗುವುದು

'(ಉ) ಫಲಾನುಭವಿಗಳನ್ನು ಗುರುತಿಸುವಲ್ಲಿ ಲೋಪದೋಷ ಉಂಟಾಗಿರುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ತಾತ್ಕಾಲಿಕ ಪಡಿತರ ಕೂಪನ್ ವಿತರಣೆಯಲ್ಲಿ ವಿಳಂಬವಾಗಿರುವುದಿಲ್ಲ

Annexure Qn No 1220

Sl No	District Name	No of Temporary Coupons Distributed				
		APN	AAY	Akshava	APL	Total
1	Bagalkot	1708	16702	186716	130415	365541
2	Bangalore (R)	2523	34043	297229	110365	444160
3	Bangalore (U)	763	18147	179631	130796	324357
4	Belgaum	0	92825	481897	359361	934088
5	Bellary	0	65978	208504	163912	438394
6	Bidar	1596	44901	159954	116366	322817
7	Bijapur	275	55368	171694	146680	378909
8	Chamarajanagar	1038	86035	152022	52802	241897
9	Chikmagalur	493	23380	149436	85785	269044
10	Chitradurga	0	46767	222289	71745	340799
11	Dakshina Kannada	351	15854	150218	170805	337228
12	Davanagere	0	33229	245136	187167	405512
13	Dharwad	290	32192	174204	144804	819190
14	Gadag	37	31637	104556	74350	210690
15	Gulbarga	1741	101405	323733	229412	656291
16	Hassan	0	24723	311426	85328	421477
17	Haveri	1258	49597	164629	71341	286820
18	Kodagu	407	5126	78676	50213	184422
19	Kolar	4167	65879	347819	185703	603558
20	Koppal	146	14680	119993	81807	243628
21	Mandya	0	37208	285571	117353	440132
22	Mysore	1835	47991	387583	197855	685244
23	Raichur	2343	60270	130884	142831	356328
24	Shimoga	1323	40666	190874	136253	369116
25	Tumkur	1558	53512	380261	174383	609714
26	Udupi	391	17855	94047	102525	214818
27	Uttara Kannada	624	16714	165894	108106	291338
	Total	**25532**	**115463**	**5854758**	**3575456**	**10610417**
	Bangalore R Area	0	18770	200964	860287	1080018
	Bangalore Urban 7 CMC's	0	2482	72263	117023	191768
	Total	**25532**	**1175903**	**6127982**	**1552766**	**11882203**